**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ**

**ಸಿಂದಗಿ**

ಸಿ.ಸಿ.ನಂಬರ್ : 1869/2021

ಪಿ.ಡಬ್ಲ್ಯೂ : 1

ಸಿ.ಡಬ್ಲ್ಯೂ : 1

| | |
|---|---|
| ಸಾಕ್ಷಿದಾರರ ಹೆಸರು | : ಶಾರದಾಬಾಯಿ ರಾಠೋಡ |
| ತಂದೆಯ ಹೆಸರು | : ಬಾಬು ರಾಠೋಡ |
| ವಯಸ್ಸು | : 50 |
| ಉದ್ಯೋಗ | : ಮನೆಗೆಲಸ |
| ವಾಸಸ್ಥಳ | : ಪಡಗಾನೂರ |
| ಸಮಯ | 1.30 |

ಸಾಕ್ಷಿಗೆ ಇಂದು ದಿನಾಂಕಃ 27.06.2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 4 ನನ್ನ ಮಗ ಇರುತ್ತಾರೆ. ನನಗೆ 4 ಜನ ಮಕ್ಕಳು ಅವರೆಂದರೆ ವಿನೋದ, ವಿಶಾಲ, ವಿಕ್ರಮ ಮತ್ತು ವಿಕಾಸ ಅಂತಾ ಇರುತ್ತದೆ. ಮನೆಯಲ್ಲಿ ನಾನು ನನ್ನ ಗಂಡ ಮತ್ತು ಮಕ್ಕಳು ವಾಸವಾಗಿದ್ದೇವೆ. ಚಾ ಸಾ 4 ವಿದ್ಯಾರ್ಥಿ ಇದದ್ದು ದೇವರ ಹಿಪ್ಪರಗಿ ಶಾಲೆಯಲ್ಲಿ ಓದುತ್ತಿದ್ದಾನೆ. ಪ್ರತಿನಿತ್ಯ ಚಾಸಾ 4 ರವರು ಶಾಲೆಗೆ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಹೋಗಿ ಬಂದು ಮಾಡುತ್ತಾರೆ.

ಅಂದಾಜು 4 ವರ್ಷಗಳ ಹಿಂದೆ ಎಂದಿನಂತೆ ಚಾ ಸಾ 4 ರವರು ಶಾಲೆಗೆ ಹೋಗಿ ಮನೆಗೆ ವಾಪಸ್ ಸರ್ಕಾರಿ ಬಸ್ಸಿನಲ್ಲಿ ಬರುತ್ತಿದ್ದಾಗ ಸದರಿಯವರು ಪಡಗಾನೂರ ಕ್ರಾಸ್‌ಗೆ ನಿಲ್ಲಿಸಿದ್ದು ಪ್ರಮಾಣಿಕರು ಬಸ್ಸಿನಿಂದ ಇಳಿಯುತ್ತಿದ್ದು ಅದರಂತೆ ಚಾ ಸಾ 4 ರವರು ಬಸ್ಸನ್ನು ಇಳಿಯುತ್ತಿದ್ದು, ಬಸ್ಸನ್ನು ಚಾಲಕ ಜೋರು ಮಾಡಿದ್ದು ಆಗ ಚಾ ಸಾ 4 ರವರು ಕೆಳಗೆ ಬಿದ್ದಿರುತ್ತಾರೆ. ನಾನು ಮತ್ತು ಮತ್ತು ನನ್ನ ಗಂಡ ಮನೆಯಲ್ಲಿದ್ದಾಗ ಚಾ ಸಾ 4 ರವರಿಗೆ ಅಪಘಾತವಾಗಿರುವ ವಿಷಯವನ್ನು ಚಾ ಸಾ 6 ರವರು ನಮಗೆ ತಿಳಿಸಿರುತ್ತಾರೆ.

ನಾವು ಹೋಗುವಷ್ಟರಲ್ಲಿ ನನ್ನ ಮಗನನ್ನು ದೇವರ ಹಿಪ್ಪರಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾವು ಹೋಗಿ ನೋಡಲಾಗಿ ನನ್ನ ಮಗನ ತಲೆಗೆ, ಭುಜಕ್ಕೆ ಮತ್ತು ಬೆನ್ನಿಗೆ ಗಾಯಗಳು ಆಗಿದ್ದವು. ನಂತರ ಅಲ್ಲಿಂದ ನನ್ನ ಮಗನನ್ನು ಹೆಚ್ಚಿನ ಚಿಕಿತ್ಸೆಗೆ ವಿಜಯಪುರ ಸಂಜೀವಿನಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಈ ವಿಷಯವಾಗಿ ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಸದರಿಯವರ ಹೇಳಿಕೆಯ ದೂರಾಗಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಹೆಬ್ಬೆಟ್ಟಿನ ಸಹಿ ನೋಡಿ ಗುರುತಿಸಿದ್ದು ಅವು ಹಬ್ಬೆಟ್ಟಿನ ಸಹಿ ಆದ ಕಾರಣ ಅವುಗಳನ್ನು ನಿಶಾನೆ ಎಂದು ಗುರುತಿಸಿರುವುದಿಲ್ಲ.

ಚಾ ಸಾ 6 ರವರು ಬಸ್ಸನ್ನು ಜೋರಾಗಿ ಬಿಟ್ಟಿದ್ದರಿಂದ ನನ್ನ ಮಗ ಬಿದ್ದಿರುತ್ತಾನೆ ಎಂದು ಹೇಳಿರುತ್ತಾರೆ ನನಗೆ ಬಸ್ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಅಪಘಾತವು ಚಾಲಕನ ತಪ್ಪಿನಿಂದ ಆಗಿರುತ್ತದೆ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ**

ದಿನಾಂಕ 16-02-2021 ರಂದು ಅಪಘಾತವಾಗಿರುತ್ತದೆ ಎಂದರೆ ಸರಿ. ಆಗ ಸಮಯ ಬೆಳಿಗ್ಗೆ 11.30 ಗಂಟೆ ಆಗಿತ್ತು ಎಂದರೆ ಸರಿ. ಚಾ ಸಾ 6 ರವರು ಹೇಳಿದನಂತರ ನಾನು ಮತ್ತುನನ್ನ ಗಂಡ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಮಗ ಮಾತನಾಡುವ ಸ್ಥಿತಿಯಲ್ಲಿದ್ದಿರಲಿಲ್ಲ ಎಂದರೆ ಸರಿ. ಚಾ ಸಾ 6 ರವರನ್ನು ಅಪಘಾತದ ಬಗ್ಗೆ ವಿಚಾರಿಸಲಾಗಿ ಸದರಿಯವರು ಚಾ ಸಾ 4 ರವರು ಅಪಘಾತಪಡಿಸಿದೆ ಎನ್ನಲಾದ ಬಸ್ಸಿನಲ್ಲಿ ಬರುತ್ತಿದ್ದಾಗ ಚಾಲಕ ಬಸ್ಸನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಪಡಗಾನೂರ ಕ್ರಾಸ್ ಹತ್ತಿರ ನಿಲ್ಲಿಸಿದಾಗ ಇತರ ಪ್ರಯಾಣಿಕರೊಂದಿಗೆ ಚಾ ಸಾ 4 ರವರು ಇಳಿಯುತ್ತಿದ್ದಾಗ ಬಸ್ಸಿನ ಚಾಲಕ ವಾಹನನ್ನು ಜೋರು ಮಾಡಿದ್ದರಿಂದ ನನ್ನ ಮಗ ಕೆಳಗೆ ಬಿದ್ದಿರುತ್ತಾರೆ ಎಂದು ಗೊತ್ತಾಗಿದ್ದು ಚಾ ಸಾ 6 ರವರು ಸಹ ಆ ಸಮಯದಲ್ಲಿ ಅಲ್ಲೆ ಇದ್ದರೂ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಚಾ ಸಾ 6 ರವರು ಸ್ಥಳಿಯರೊಂದಿಗೆ ಬಸ್ಸಿನ ಚಾಲಕನನ್ನು ಹಾಗೂ ಬಸ್ಸಿನ ನಿರ್ವಾಹಕನನ್ನು ವಿಚಾರಿಸಲಾಗಿ ಚಾಲಕನ ಹೆಸರು ಆನಂದ ಎಂದು ಹಾಗೂ ಅಮೀರ ಬಕ್ಷ ಮನಗೂಳಿ ಎಂದು ಗೊತ್ತಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿಯವರು ಬಸ್ ನಂಬರ ಕೆಎ 28/ಎಫ್/2476 ಎಂದು ಹೇಳಿರುತ್ತಾರೆ ಎಂದರೆ ಸರಿ. ಬಸ್ ಚಾಲಕನನ್ನು ನಾನು ನೋಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಸ್ ಚಾಲಕನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಎಸ್ ಕೆ ವಕೀಲರಿಂದ**

ಚಾ ಸಾ 5 ಮತ್ತು 6 ರವರು ನಮ್ಮ ಅಣ್ಣ ತಮ್ಮಂದಿರರು ಇರುತ್ತಾರೆ. ನಾನು ಅಪಘಾತವಾದಾಗ ಮನೆಯಲ್ಲಿದ್ದ ಕಾರಣ ಅಪಘಾತ ಹೇಗೆ ಆಗಿರುತ್ತದೆ

ಎಂದು ನಾನು ನೋಡಿರುವುದಿಲ್ಲ ಹಾಗೂ ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಚಾ ಸಾ 5 ಮತ್ತು 6 ರವರು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಅಪಘಾತಪಡಿಸಿದೆ ಎನ್ನಲಾದ ವಾಹನ ಸಂಖ್ಯೆ ಹಾಗೂ ಚಾಲಕನ ಹೆಸರು ಸಾಕ್ಷಿ ಯಾವುದೇ ಉತ್ತರ ನೀಡದೆ ಸುಮ್ಮನೆ ನಿಂತಿದ್ದು ಪುನಃ ನನಗೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಅಪಘಾತವು ಯಾವ ದಿನಾಂಕದಂದು ಆಗಿರುತ್ತದೆ ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ದೂರನ್ನು ಯಾವ ದಿನಾಂಕದಂದು ನೀಡಿರುತ್ತೀರಾ ಎಂದು ಕೇಳಲಾಗಿ ಎಂದರೆ ಸಾಕ್ಷಿ ನನಗೆ ಓದಲು ಬರೆಯಲು ಬರುವುದಿಲ್ಲ ಹಾಗಾಗಿ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ.

ನಿಪಿ 1 ಪೋಲಿಸರು ತಯಾರಿಸಿ ಅದಕ್ಕೆ ನನ್ನ ಹೆಬ್ಬೆಟ್ಟಿನ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಮೈದುನನ ಮಗನಾದ ಸಂತೋಷ ಬರೆದಿರುತ್ತಾರೆ ನುಡಿಯುತ್ತಾರೆ. ಪೋಲಿಸರು ಹೇಳಿದಂತೆ ಸಂತೋಷ ಬರೆದಿದ್ದು ಅದಕ್ಕೆ ನಾನು ಹೆಬ್ಬೆಟ್ಟಿನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದೇವರ ಹಿಪ್ಪರಗಿಯಿಂದ ಪಡಗಾನೂರ ಕ್ರಾಸ್ ಎಷ್ಟು ಅಂತರ ಇರುತ್ತದೆ ಎಂದರೆ ಸಾಕ್ಷಿ 5 ಕಿ ಮೀ ಅಂತರ ಇರುತ್ತದೆ ಎಂದು ನುಡಿದಿರುತ್ತಾರೆ. ಬಸ್ಸಿನ ನಿರ್ವಾಹಕರು ಬಸ್ ಪಾಸ್ ಕೇಳಿದಾಗ ನನ್ನ ಮಗನ ಹತ್ತಿರ ಬಸ್ ಪಾಸ್ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ದೇವರ ಹಿಪ್ಪರಗಿಯಿಂದ ಪಡಗಾನೂರ ಮಾರ್ಗವಾಗಿ ಹೋಗುವಾಗ ಬಸ್ಸಿನಲ್ಲಿ ಟಿಕೇಟನ್ನು ಹಾಗೂ ಬಸ್ ಪಾಸ್ ಚೆಕ ಮಾಡುತ್ತಿದಿದ್ದ ನನ್ನ ಮಗನ ಹತ್ತಿರ ಬಸ್ ಪಾಸ್ ಇಲ್ಲದ ಕಾರಣ ಹಿಡಿಯುತ್ತಾರೆ ಎಂದು ಆತನ ಬಸ್ಸಿನಿಂದ ಇಳಿಯಲು ಹೋಗಿದ್ದನು ಎಂದರೆ ಸರಿಯಲ್ಲ.

ನಾನು ಸಹ ದಿನ ಬಸ್ಸಿನಲ್ಲಿ ಓಡಾಡುತ್ತೇನೆ ಎಂದರೆ ಸರಿ. ಬಸ್ಸಿನ ಮುಂಭಾಗ ಚಾಲಕ ಇದ್ದು ಹಿಂಭಾಗದಲ್ಲಿ ಬಸ್ಸಿನ ನಿರ್ವಾಹಕ ಇರುತ್ತಾರೆ ಎಂದರೆ ಸರಿ. ಪಡಗಾನೂರ ಕ್ರಾಸ ವಿಜಯಪುರದ ಹೈವೆಗೆ ಹೊಂದಿಕೊಂಡು ಇರುತ್ತದೆ ಎಂದರೆ

ಸರಿ. ಹಾಗಾಗಿ ಸದರಿ ರಸ್ತೆಯಲ್ಲಿ ವಾಹನಗಳು ಹೆಚ್ಚಾಗಿ ಓಡಾಡುತ್ತವೆ ಎಂದರೆ ಸರಿ. ವಾಹನಗಳು ಹೆಚ್ಚಾಗಿ ಓಡಾಡುವ ಕಾರಣ ಚಾಲಕ ಮುಂದೆ ನೋಡುಕೊಂಡು ಬಸ್ಸನ್ನು ಚಾಲನೆ ಮಾಡುತ್ತಾರೆ ಎಂದರೆ ಸಾಕ್ಷಿ ಪ್ರಮಾಣಿಕರು ಬಸ್ಸನ್ನು ಇಳಿಯುತ್ತಿದ್ದರು ಎಂದು ಮಾತ್ರ ನುಡಿಯುತ್ತಾರೆ. ಸಾಮಾನ್ಯವಾಗಿ ನಿರ್ವಹಾಕರು ವಿಶಲ್ ಹೊಡದ ನಂತರವೇ ಚಾಲಕ ಬಸ್ಸನ್ನು ನಿಲ್ಲಿಸುವದು ಮತ್ತು ಫ್ರಾರಂಭಿಸುವುದು ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ ನಿರ್ವಾಹಕ ವಿಶಲ್ ಹೊಡೆಯದೇ ಪ್ರಯಾಣಿಕರು ಇಳಿಯುತ್ತಿದ್ದಾಗಲೇ ಆರೋಪಿ ವಾಹನವನ್ನು ಚಾಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚಾ ಸಾ 4 ರವರ ತಪ್ಪಿನಿದಂದಲೇ ಅಪಘಾತವಾಗಿದ್ದರೂ ಸಹ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಚಾಲಕ ಮುಂದೆ ನೋಡಿ ವಾಹನ ಚಾಲನೆ ಮಾಡುತ್ತಿದ್ದು ಹಿಂದೆ ನೋಡಿರುವುದಿಲ್ಲ ನನ್ನ ಮಗನೆ ಅವಸರವಾಗಿ ಇಳಿಯಲು ಹೋಗಿ ಬಿದ್ದು ಪೆಟ್ಟು ಮಾಡಿಕೊಂಡಿದ್ದರೂ ಸಹ ಪರಿಹಾರ ಪಡೆಯಲು ಸುಳ್ಳು ದೂರನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪರಿಹಾರದ ಸಲುವಾಗಿ ಪ್ರಕರಣವನ್ನು ದಾಖಲಿಸಿದ್ದು ಆ ಕಾರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.